Test Paper : **II**

Test Subject : **COMMERCE**

Test Subject Code : **K-0118**

Roll No. | | | | | | | | |

(Figures as per admission card)

OMR Sheet No. : ________________

TEST BOOKLET SERIAL NO.

**Name & Signature of Invigilator/s**

Signature : ______________________________

Name : ______________________________

Time : 2 Hours

Maximum Marks : 200

Number of Pages in this Booklet : **32**

Number of Questions in this Booklet : **100**

**ಅಭ್ಯರ್ಥಿಗಳಿಗೆ ಸೂಚನೆಗಳು**

1. ಈ ಪುಟದ ಮೇಲ್ತುದಿಯಲ್ಲಿ ಒದಗಿಸಿದ ಸ್ಥಳದಲ್ಲಿ ನಿಮ್ಮ ರೋಲ್ ನಂಬರನ್ನು ಬರೆಯಿರಿ.
2. ಈ ಪತ್ರಿಕೆಯು ಬಹು ಆಯ್ಕೆ ವಿಧದ ನೂರು (100) ಪ್ರಶ್ನೆಗಳನ್ನು ಒಳಗೊಂಡಿದೆ.
3. ಪರೀಕ್ಷೆಯ ಪ್ರಾರಂಭದಲ್ಲಿ, ಪ್ರಶ್ನೆ ಪುಸ್ತಿಕೆಯನ್ನು ನಿಮಗೆ ನೀಡಲಾಗುವುದು. ಮೊದಲ 5 ನಿಮಿಷಗಳಲ್ಲಿ ನೀವು ಪುಸ್ತಿಕೆಯನ್ನು ತೆರೆಯಲು ಮತ್ತು ಕೆಳಗಿನಂತೆ ಕಡ್ಡಾಯವಾಗಿ ಪರೀಕ್ಷಿಸಲು ಕೋರಲಾಗಿದೆ.
   (i) ಪಶ್ನೆಪುಸ್ತಿಕೆಗೆ ಪ್ರವೇಶಾವಕಾಶ ಪಡೆಯಲು, ಈ ಹೊದಿಕೆ ಪುಟದ ಅಂಚಿನ ಮೇಲಿರುವ ಪೇಪರ್ ಸೀಲನ್ನು ಹರಿಯಿರಿ. ಸ್ಟಿಕ್ಕರ್ ಸೀಲ್ ಇಲ್ಲದ ಅಥವಾ ತೆರೆದ ಪುಸ್ತಿಕೆಯನ್ನು ಸ್ವೀಕರಿಸಬೇಡಿ.
   (ii) **ಪುಸ್ತಿಕೆಯಲ್ಲಿನ ಪ್ರಶ್ನೆಗಳ ಸಂಖ್ಯೆ ಮತ್ತು ಪುಟಗಳ ಸಂಖ್ಯೆಯನ್ನು ಮುಖಪುಟದ ಮೇಲೆ ಮುದ್ರಿಸಿದ ಮಾಹಿತಿಯೊಂದಿಗೆ ತಾಳೆ ನೋಡಿರಿ. ಪುಟಗಳು/ಪ್ರಶ್ನೆಗಳು ಕಾಣೆಯಾದ ಅಥವಾ ದ್ವಿಪ್ರತಿ ಅಥವಾ ಅನುಕ್ರಮವಾಗಿಲ್ಲದ ಅಥವಾ ಇತರ ಯಾವುದೇ ವ್ಯತ್ಯಾಸದ ದೋಷಪೂರಿತ ಪುಸ್ತಿಕೆಯನ್ನು ಕೂಡಲೆ 5 ನಿಮಿಷದ ಅವಧಿ ಒಳಗೆ, ಸಂವೀಕ್ಷಕರಿಂದ ಸರಿ ಇರುವ ಪುಸ್ತಿಕೆಗೆ ಬದಲಾಯಿಸಿಕೊಳ್ಳಬೇಕು. ಆ ಬಳಿಕ ಪ್ರಶ್ನೆಪತ್ರಿಕೆಯನ್ನು ಬದಲಾಯಿಸಲಾಗುವುದಿಲ್ಲ, ಯಾವುದೇ ಹೆಚ್ಚು ಸಮಯವನ್ನೂ ಕೊಡಲಾಗುವುದಿಲ್ಲ.**
4. ಪ್ರತಿಯೊಂದು ಪ್ರಶ್ನೆಗೂ (A), (B), (C) ಮತ್ತು (D) ಎಂದು ಗುರುತಿಸಿದ ನಾಲ್ಕು ಪರ್ಯಾಯ ಉತ್ತರಗಳಿವೆ. ನೀವು ಪ್ರಶ್ನೆಯ ಎದುರು ಸರಿಯಾದ ಉತ್ತರದ ಮೇಲೆ, ಕೆಳಗೆ ಕಾಣಿಸಿದಂತೆ ಅಂಡಾಕೃತಿಯನ್ನು ಕಪ್ಪಾಗಿಸಬೇಕು.

   **ಉದಾಹರಣೆ** : (A) (B) ● (D)

   (C) ಸರಿಯಾದ ಉತ್ತರವಾಗಿದ್ದಾಗ.
5. ಈ ಪ್ರಶ್ನೆ ಪತ್ರಿಕೆಯ ಜೊತೆಯಲ್ಲಿ **ಕೊಟ್ಟಿರುವ OMR ಉತ್ತರ ಹಾಳೆಯಲ್ಲಿ ನಿಮ್ಮ ಉತ್ತರಗಳನ್ನು ಸೂಚಿಸತಕ್ಕದ್ದು**. OMR ಹಾಳೆಯಲ್ಲಿ ಅಂಡಾಕೃತಿಯಲ್ಲದೆ ಬೇರೆ ಯಾವುದೇ ಸ್ಥಳದಲ್ಲಿ ಉತ್ತರವನ್ನು ಗುರುತಿಸಿದರೆ, ಅದರ ಮೌಲ್ಯಮಾಪನ ಮಾಡಲಾಗುವುದಿಲ್ಲ.
6. OMR ಉತ್ತರ ಹಾಳೆಯಲ್ಲಿ ಕೊಟ್ಟ ಸೂಚನೆಗಳನ್ನು ಜಾಗರೂಕತೆಯಿಂದ ಓದಿರಿ.
7. ಎಲ್ಲಾ ಕರಡು ಕೆಲಸವನ್ನು ಪುಸ್ತಿಕೆಯ ಕೊನೆಯಲ್ಲಿ ಮಾಡತಕ್ಕದ್ದು.
8. ನಿಮ್ಮ ಗುರುತನ್ನು ಬಹಿರಂಗಪಡಿಸಬಹುದಾದ ನಿಮ್ಮ ಹೆಸರು ಅಥವಾ ಯಾವುದೇ ಚಿಹ್ನೆಯನ್ನು, ಸಂಗತವಾದ ಸ್ಥಳ ಹೊರತು ಪಡಿಸಿ, OMR ಉತ್ತರ ಹಾಳೆಯ ಯಾವುದೇ ಭಾಗದಲ್ಲಿ ಬರೆದರೆ, ನೀವು ಅನರ್ಹತೆಗೆ ಬಾಧ್ಯರಾಗುತ್ತೀರಿ.
9. ಪರೀಕ್ಷೆಯು ಮುಗಿದನಂತರ, ಕಡ್ಡಾಯವಾಗಿ OMR ಉತ್ತರ ಹಾಳೆಯನ್ನು ಸಂವೀಕ್ಷಕರಿಗೆ ನೀವು ಹಿಂತಿರುಗಿಸಬೇಕು ಮತ್ತು ಪರೀಕ್ಷಾ ಕೊಠಡಿಯ ಹೊರಗೆ OMRನ್ನು ನಿಮ್ಮೊಂದಿಗೆ ಕೊಂಡೊಯ್ಯಕೂಡದು.
10. ಪರೀಕ್ಷೆಯ ನಂತರ, ಪರೀಕ್ಷಾ ಪ್ರಶ್ನೆಪತ್ರಿಕೆಯನ್ನು ಮತ್ತು ನಕಲು OMR ಉತ್ತರ ಹಾಳೆಯನ್ನು ನಿಮ್ಮೊಂದಿಗೆ ತೆಗೆದುಕೊಂಡು ಹೋಗಬಹುದು.
11. **ನೀಲಿ/ಕಪ್ಪು ಬಾಲ್‌ಪಾಯಿಂಟ್ ಪೆನ್ ಮಾತ್ರವೇ ಉಪಯೋಗಿಸಿರಿ.**
12. **ಕ್ಯಾಲ್ಕುಲೇಟರ್, ವಿದ್ಯುನ್ಮಾನ ಉಪಕರಣ ಅಥವಾ ಲಾಗ್ ಟೇಬಲ್ ಇತ್ಯಾದಿಯ ಉಪಯೋಗವನ್ನು ನಿಷೇಧಿಸಲಾಗಿದೆ.**
13. **ಸರಿ ಅಲ್ಲದ ಉತ್ತರಗಳಿಗೆ ಋಣ ಅಂಕ ಇರುವುದಿಲ್ಲ.**
14. **ಕನ್ನಡ ಮತ್ತು ಇಂಗ್ಲೀಷ್ ಆವೃತ್ತಿಗಳ ಪ್ರಶ್ನೆಪತ್ರಿಕೆಗಳಲ್ಲಿ ಯಾವುದೇ ರೀತಿಯ ವ್ಯತ್ಯಾಸಗಳು ಕಂಡುಬಂದಲ್ಲಿ, ಇಂಗ್ಲೀಷ್ ಆವೃತ್ತಿಗಳಲ್ಲಿರುವುದೇ ಅಂತಿಮವೆಂದು ಪರಿಗಣಿಸಬೇಕು.**

**Instructions for the Candidates**

1. Write your roll number in the space provided on the top of this page.
2. This paper consists of Hundred multiple-choice type of questions.
3. At the commencement of examination, the question booklet will be given to you. In the first 5 minutes, you are requested to open the booklet and compulsorily examine it as below :
   (i) To have access to the Question Booklet, tear off the paper seal on the edge of the cover page. Do not accept a booklet without sticker seal or open booklet.
   (ii) **Tally the number of pages and number of questions in the booklet with the information printed on the cover page. Faulty booklets due to pages/questions missing or duplicate or not in serial order or any other discrepancy should be got replaced immediately by a correct booklet from the invigilator within the period of 5 minutes. Afterwards, neither the Question Booklet will be replaced nor any extra time will be given.**
4. Each item has four alternative responses marked (A), (B), (C) and (D). You have to darken the circle as indicated below on the correct response against each item.

   **Example** : (A) (B) ● (D)

   where (C) is the correct response.
5. Your responses to the questions are to be indicated in the **OMR Sheet kept inside this Booklet.** If you mark at any place other than in the circles in the OMR Sheet, it will not be evaluated.
6. Read the instructions given in OMR carefully.
7. Rough Work is to be done in the end of this booklet.
8. If you write your name or put any mark on any part of the OMR Answer Sheet, except for the space allotted for the relevant entries, which may disclose your identity, you will render yourself liable to disqualification.
9. You have to return the test OMR Answer Sheet to the invigilators at the end of the examination compulsorily and must NOT carry it with you outside the Examination Hall.
10. You can take away question booklet and carbon copy of OMR Answer Sheet after the examination.
11. **Use only Blue/Black Ball point pen.**
12. **Use of any calculator, electronic gadgets or log table etc., is prohibited.**
13. **There is no negative marks for incorrect answers.**
14. **In case of any discrepancy found in the Kannada translation of a question booklet the question in English version shall be taken as final.**

# ವಾಣಿಜ್ಯಶಾಸ್ತ್ರ
## ಪೇಪರ್ – II

**ಗಮನಿಸಿ :** ಈ ಪತ್ರಿಕೆಯು **(100) ನೂರು** ವಸ್ತುನಿಷ್ಠ ಮಾದರಿಯ ಪ್ರಶ್ನೆಗಳನ್ನೊಳಗೊಂಡಿದ್ದು, ಪ್ರತಿಯೊಂದು ಪ್ರಶ್ನೆಯೂ **ಎರಡು (2)** ಅಂಕಗಳನ್ನು ಹೊಂದಿದೆ. **ಎಲ್ಲಾ** ಪ್ರಶ್ನೆಗಳನ್ನೂ ಕಡ್ಡಾಯವಾಗಿ ಉತ್ತರಿಸಬೇಕು.

**1.** ರಾಜಕೀಯದ ಸ್ಥಿರತೆ ಎಂದರೆ

(A) ಒಂದೇ ರಾಜಕೀಯ ಪಕ್ಷವು ಸರ್ಕಾರವನ್ನು ರಚಿಸುವುದು

(B) ಯಾವುದೇ ಪಕ್ಷ ಅಧಿಕಾರದಲ್ಲಿ ಇದ್ದಾಗಲೂ ದೇಶದ ನೀತಿಯು ಒಂದೇ ತೆರನಾಗಿರುವುದು

(C) ಒಂದೇ ರಾಜಕೀಯ ಪಕ್ಷವು ಚುನಾವಣೆಯಲ್ಲಿ ಭಾರಿ ಬಹುಮತ ಪಡೆಯುವುದು

(D) ಪ್ರಮುಖ ನಿರ್ಧಾರಗಳಿಗೆ ಸಂಬಂಧಿಸಿದಂತೆ ರಾಜಕೀಯ ಪಕ್ಷಗಳಲ್ಲಿ ಸಹಮತ

**2.** ಪೂರೈಕೆ ಕಡೆಯ ಆರ್ಥಿಕ ಸುಧಾರಣೆಯನ್ನು ____________ ಎಂದು ಕರೆಯಬಹುದು.

(A) ವ್ಯಾಪಕ ಆರ್ಥಿಕ ಸ್ಥಿರತೆ

(B) ಮೊದಲ ತಲೆಮಾರಿನ ಸುಧಾರಣೆಗಳು

(C) ಮಾರುಕಟ್ಟೆ ಆರ್ಥಿಕ ವ್ಯವಸ್ಥೆಯ ಸುಧಾರಣೆಗಳು

(D) ರಚನಾತ್ಮಕ ಸುಧಾರಣೆಗಳು

**3.** **ಪ್ರತಿಪಾದನೆ (A)** : ಬಡ್ಡಿ ದರಗಳಿಗೆ ಸಂಬಂಧಿಸಿದಂತೆ ಸರ್ಕಾರಕ್ಕೂ ಮತ್ತು ಆರ್.ಬಿ.ಐ.ಗೂ ಯಾವಾಗಲೂ ಅಭಿಪ್ರಾಯ ಭೇದವಿರುವುದನ್ನು ಕಾಣಬಹುದು.

**ತರ್ಕ (R)** : ಸರ್ಕಾರದ ಪ್ರಮುಖ ದೃಷ್ಟಿ ಅಭಿವೃದ್ಧಿಯ ಕಡೆ ಇದ್ದರೆ ಆರ್.ಬಿ.ಐ.ನ ದೃಷ್ಟಿ ಹಣದುಬ್ಬರದ ಕಡೆ ಇರುತ್ತದೆ.

**ಸಂಕೇತಗಳು :**

(A) ಎರಡೂ (A) ಮತ್ತು (R) ಸರಿಯಾಗಿವೆ

(B) (A) ಸರಿಯಾಗಿದೆ ಮತ್ತು (R) ಸರಿಯಾಗಿಲ್ಲ

(C) ಎರಡೂ (A) ಮತ್ತು (R) ಸರಿಯಾಗಿಲ್ಲ

(D) (A) ಸರಿಯಾಗಿಲ್ಲ ಮತ್ತು (R) ಸರಿಯಾಗಿದೆ

**4.** ಈ ಕೆಳಗಿನವುಗಳನ್ನು ಹೊಂದಿಸಿರಿ :

| ಪಟ್ಟಿ – A | ಪಟ್ಟಿ – B |
|---|---|
| a) ವ್ಯವಹಾರದ ಸುಲಭತೆ | i) ಸ್ಥಿರ ಆಸ್ತಿ ವ್ಯವಹಾರ ನಿಯಂತ್ರಣ |
| b) ದಿವಾಳಿತನದ ಕಾನೂನು | ii) ಯೋಜನೆ ಹಾಗೂ ನೀತಿ ಮಾರ್ಗ |
| c) ಆರ್.ಇ.ಆರ್.ಎ. | iii) ಪ್ರವೇಶ ನೀತಿ |
| d) ನೀತಿ ಆಯೋಗ | iv) ನಿರ್ಗಮನ ನೀತಿ |

**ಸಂಕೇತಗಳು :**

| | (a) | (b) | (c) | (d) |
|---|---|---|---|---|
| (A) | (iv) | (iii) | (i) | (ii) |
| (B) | (ii) | (iii) | (i) | (iv) |
| (C) | (iii) | (iv) | (i) | (ii) |
| (D) | (ii) | (iv) | (i) | (iii) |

**5.** **ಹೇಳಿಕೆ (A)**: ಖಾಸಗೀಕರಣವೆಂದರೆ ವಿಶಾಲಾರ್ಥದಲ್ಲಿ ಸರ್ಕಾರವು ಜನರ ಜೀವನ ಪ್ರಕ್ರಿಯೆಯಿಂದ ಹಿಂದೆ ಸರಿಯುವುದು.

**ಹೇಳಿಕೆ (B)**: ಖಾಸಗೀಕರಣದ ಅಂತಿಮ ಗುರಿ ಮಾರುಕಟ್ಟೆ ಆಧಾರಿತ ಆರ್ಥಿಕತೆಗೆ ಹೊಂದಿಕೊಳ್ಳುವುದು.

**ಸಂಕೇತಗಳು :**

(A) ಎರಡೂ ಹೇಳಿಕೆಗಳು ಸರಿ

(B) ಎರಡೂ ಹೇಳಿಕೆಗಳು ತಪ್ಪು

(C) ಹೇಳಿಕೆ (A) ಸರಿ ಮತ್ತು (B) ತಪ್ಪು

(D) ಹೇಳಿಕೆ (A) ತಪ್ಪು ಮತ್ತು (B) ಸರಿ

# COMMERCE
## Paper – II

**Note** : This paper contains **hundred** (**100**) objective type questions. **Each** question carries **two** (**2**) marks. **All** questions are **compulsory**.

**1.** Political stability means

(A) A single political party forming the Government

(B) Continuity in policy of the country irrespective of the party in power

(C) A single political party getting huge majority in elections

(D) Consensus on major decisions among political parties

**2.** The supply side of economic reforms is known as

(A) Macro economic stabilisation

(B) First generation reforms

(C) Market economy reforms

(D) Structural reforms

**3.** **Assertion (A)** : One finds always a difference of opinion between the Government and the RBI regarding interest rates.

**Reasoning (R)** : While the main focus of the Government is on growth, the RBI always focuses on inflation.

**Codes** :

(A) Both (A) and (R) are correct

(B) (A) is correct and (R) is incorrect

(C) Both (A) and (R) are incorrect

(D) (A) is incorrect and (R) is correct

**4.** Match the following :

| **List – A** | **List – B** |
|---|---|
| a) Ease of doing business | i) Regulation of real estate |
| b) Bankruptcy law | ii) Planning and policy guidance |
| c) RERA | iii) Entry policy |
| d) NITI Aayog | iv) Exit policy |

**Codes** :

| | **(a)** | **(b)** | **(c)** | **(d)** |
|---|---|---|---|---|
| (A) | (iv) | (iii) | (i) | (ii) |
| (B) | (ii) | (iii) | (i) | (iv) |
| (C) | (iii) | (iv) | (i) | (ii) |
| (D) | (ii) | (iv) | (i) | (iii) |

**5.** **Statement (A)** : In a broader sense, privatisation involves withdrawal of the State from the lives and activities of the people.

**Statement (B)** : The ultimate objective of the privatisation is to move towards a market economy.

**Codes** :

(A) Both statements are true

(B) Both statements are wrong

(C) Statement (A) is correct and (B) is wrong

(D) Statement (A) is wrong and (B) is correct

6. ಹೊಸ ವ್ಯಾಖ್ಯಾನದ ಪ್ರಕಾರ 'MSMEs' ನ ಸೂಕ್ಷ್ಮ ಉದ್ಯಮದ ಆದಾಯವು ಯಾವುದಾಗಿರುತ್ತದೆ ?
   (A) ರೂ. 5 ಕೋಟಿಗಿಂತ ಕಡಿಮೆ
   (B) ರೂ. 1 ಕೋಟಿಗಿಂತ ಕಡಿಮೆ
   (C) ರೂ. 50 ಲಕ್ಷಗಳಿಗಿಂತ ಕಡಿಮೆ
   (D) ರೂ. 25 ಲಕ್ಷಗಳಿಗಿಂತ ಕಡಿಮೆ

7. ಭಾರತದಲ್ಲಿ ಎರಡನೇ ಪೀಳಿಗೆಯ ಸುಧಾರಣೆಗಳನ್ನು ಆರಂಭಿಸಿದ ವ್ಯಕ್ತಿ
   (A) ಪಿ.ವಿ. ನರಸಿಂಹ ರಾವ್
   (B) ನರೇಂದ್ರ ಮೋದಿ
   (C) ಅಟಲ್ ಬಿಹಾರಿ ವಾಜಪೇಯಿ
   (D) ಮನಮೋಹನ್ ಸಿಂಗ್

8. ಸರಕು ರಫ್ತು ಮಾರಾಟದಲ್ಲಿ ಭಾರತವು ಚೀನಾ ದೇಶಕ್ಕಿಂತ ಹಿಂದೆ ಉಳಿದಿರುವುದಕ್ಕೆ ಕಾರಣ
   (A) ಸ್ಪರ್ಧಾತ್ಮಕವಲ್ಲದ ಭಾರತದ ಕೈಗಾರಿಕೆಗಳು
   (B) ರಫ್ತು ಸುಂಕ ವಿಧಿಸದೇ ಇರುವುದು
   (C) ರಫ್ತು ಮಾಡಲು ಪ್ರೋತ್ಸಾಹಿಸದಿರುವುದು
   (D) ಅಪೂರ್ಣ ಬೆಳವಣಿಗೆಯ ಬಂದರುಗಳು

9. ಲೆಕ್ಕಾಚಾರ ಪರಿಕಲ್ಪನೆಗಳು ಯಾವುದನ್ನು ಆಧರಿಸಿವೆ ?
   (A) ಹಲವು ಕಲ್ಪನೆಗಳು
   (B) ಹಲವು ಅಂಕಿ ಅಂಶಗಳು
   (C) ಹಲವು ಲೆಕ್ಕಾಚಾರ ಮಾದರಿಗಳು
   (D) ಲೆಕ್ಕಾಚಾರದ ನಿರ್ದಿಷ್ಟ ಮಾನಗಳು

10. 2007 ರವರೆಗೆASB ನೀಡಿದ ಈ ಕೆಳಗಿನ ಲೆಕ್ಕಾಚಾರದ ನಿರ್ದಿಷ್ಟ ಮಾನಗಳನ್ನು ಕ್ರಮವಾಗಿ ಜೋಡಿಸಿ :
   I. ಆದಾಯ ಗುರುತಿಸುವಿಕೆ
   II. ಸರಕುಗಳ ಮೌಲ್ಯಮಾಪನ
   III. ಸವಕಳಿ ಲೆಕ್ಕಾಚಾರ
   IV. ನಗದು ಹರಿವು ಪಟ್ಟಿ

   **ಸಂಕೇತಗಳು :**

| | | | | |
|---|---|---|---|---|
| (A) | I | III | II | IV |
| (B) | II | IV | III | I |
| (C) | II | III | IV | I |
| (D) | III | IV | II | I |

11. ಈ ಕೆಳಗಿನವುಗಳಲ್ಲಿ ಯಾವುದು ಜವಾಬ್ದಾರಿಯುತ ಲೆಕ್ಕಾಚಾರಕ್ಕೆ ಸಂಬಂಧಿಸಿಲ್ಲ ?
   (A) ವೆಚ್ಚ ಕೇಂದ್ರ
   (B) ಹೂಡಿಕೆ ಕೇಂದ್ರ
   (C) ಲೆಕ್ಕಾಚಾರ ಕೇಂದ್ರ
   (D) ಆದಾಯ ಕೇಂದ್ರ

12. ಮುಂಗಡಪತ್ರದ ಯಾವ ಪರಿಕಲ್ಪನೆ ಪ್ರತಿ ರೂಪಾಯಿ ವೆಚ್ಚದ ನಿರ್ದಿಷ್ಟ ಉದ್ದೇಶದ ನ್ಯಾಯವನ್ನು ಕೇಳುತ್ತದೆ ?
   (A) ಜವಾಬ್ದಾರಿ ಮುಂಗಡಪತ್ರ
   (B) ವರಿಷ್ಠ ಮುಂಗಡಪತ್ರ
   (C) ನಮನೀಯ ಮುಂಗಡಪತ್ರ
   (D) ಶೂನ್ಯಾಧಾರಿತ ಮುಂಗಡಪತ್ರ

13. ನ್ಯಾಯಮೂರ್ತಿ ಪಿ.ಎನ್. ಭಗವತಿ ವರದಿ ಈ ಕೆಳಗಿನ ಯಾವುದಕ್ಕೆ ಸಂಬಂಧಿಸಿದೆ ?
   (A) ಈಕ್ವಿಟಿ ಬಂಡವಾಳೀಕರಣ
   (B) ಋಣ ಬಂಡವಾಳೀಕರಣ
   (C) ಮ್ಯೂಚುವಲ್ ನಿಧಿಗಳು
   (D) ಕಂಪನಿಗಳ ಸಮೀಕರಣ ಮತ್ತು ಸ್ವಾಧೀನತೆ

14. OTCEI ಒಂದು
   (A) ಸ್ಟಾಕ್ ವಿನಿಮಯ ಕೇಂದ್ರ
   (B) ಆರ್ಥಿಕ ಸಂಸ್ಥೆ
   (C) ವ್ಯಾಪಾರ ಸಂಘ
   (D) RBI ಅಂಗ ಸಂಸ್ಥೆ

15. Nikkie ಈ ಕೆಳಗಿನ ಯಾವುದಕ್ಕೆ ಸಂಬಂಧಿಸಿದೆ ?
   (A) ನೈಜೀರಿಯಾದ ಸ್ಟಾಕ್ ವಿನಿಮಯ ಕೇಂದ್ರ
   (B) ಟೋಕಿಯಾದ ಸ್ಟಾಕ್ ವಿನಿಮಯ ಕೇಂದ್ರ
   (C) ನೇಪಾಳದ ಸ್ಟಾಕ್ ವಿನಿಮಯ ಕೇಂದ್ರ
   (D) ಉತ್ತರ ಕೋರಿಯಾದ ಸ್ಟಾಕ್ ವಿನಿಮಯ ಕೇಂದ್ರ

16. BOLT ಶುರುವಾದ ವರ್ಷ ಯಾವುದು ?
   (A) 1972 (B) 1993
   (C) 1995 (D) 1987

**6.** According to new definition of MSMEs a micro enterprise is an enterprise having a revenue of
(A) less than Rs. 5 crores
(B) less than Rs. 1 crore
(C) less than Rs. 50 lakhs
(D) less than Rs. 25 lakhs

**7.** The initiator of second generation reforms in India
(A) P.V. Narasimha Rao
(B) Narendra Modi
(C) Atal Bihari Vajpayee
(D) Manmohan Singh

**8.** India is lagging behind China in merchandise exports mainly because of
(A) Uncompetitive Indian Industry
(B) Non-provision of export duties
(C) Lack of encouragement to exports
(D) Underdeveloped ports

**9.** Accounting concepts are based on
(A) Certain assumptions
(B) Certain facts and figures
(C) Certain accounting models
(D) Accounting standards

**10.** Arrange the following in the order in which they appear under Accounting Standards issued by ASB till 2007.
I. Revenue Recognition
II. Valuation of Inventories
III. Depreciation Accounting
IV. Cash Flow Statements

**Codes** :

| | | | | |
|---|---|---|---|---|
| (A) | I | III | II | IV |
| (B) | II | IV | III | I |
| (C) | II | III | IV | I |
| (D) | III | IV | II | I |

**11.** Which of the following is not related to responsibility accounting ?
(A) Cost Centre
(B) Investment Centre
(C) Accounting Centre
(D) Revenue Centre

**12.** The concept of budget that requires justification for every rupee to be spent for a specific purpose is
(A) Responsibility Budget
(B) Master Budget
(C) Flexible Budget
(D) Zero-based Budget

**13.** Justice P.N. Bhagavathi report relates to
(A) Securitisation of equity
(B) Securitisation of debt
(C) Mutual funds
(D) Mergers and acquisitions

**14.** OTCEI is a
(A) Stock Exchange Centre
(B) Financial Institution
(C) Trade Association
(D) Subsidiary of RBI

**15.** Nikkie belongs to
(A) Nigerian Stock Exchange Centre
(B) Tokyo Stock Exchange Centre
(C) Nepal Stock Exchange Centre
(D) N. Korean Stock Exchange Centre

**16.** BOLT was started in the year
(A) 1972 (B) 1993
(C) 1995 (D) 1987

**17.** ಈ ಕೆಳಗಿನವುಗಳನ್ನು ಅವು ಅಸ್ತಿತ್ವಕ್ಕೆ ಬಂದ ಕ್ರಮದಲ್ಲಿ ಜೋಡಿಸಿ.

I. BSE
II. NSE
III. LSE
IV. UTI

**ಸಂಕೇತಗಳು :**

| | | | | |
|---|---|---|---|---|
| (A) | III | I | II | IV |
| (B) | III | II | I | IV |
| (C) | IV | II | I | III |
| (D) | II | III | IV | I |

**18.** **ಪ್ರತಿಪಾದನೆ (A)** : NAV ಯು ಮ್ಯೂಚುವಲ್ ನಿಧಿಯ ಪರಿಕಲ್ಪನೆ.

**ತರ್ಕ (R)** : NAV ಯು ಒಂದು ಹೂಡಿಕೆ ಯೋಜನೆಯ ಪ್ರದರ್ಶನ ಮಾಪನ.

**ಸಂಕೇತಗಳು :**

(A) (A) ಸರಿ, ಆದರೆ (R) ಸರಿಯಲ್ಲ
(B) (A) ಸರಿಯಲ್ಲ, ಆದರೆ (R) ಸರಿ
(C) (A) ಮತ್ತು (R) ಎರಡೂ ಸರಿಯಲ್ಲ
(D) (A) ಮತ್ತು (R) ಎರಡೂ ಸರಿ

**19.** ಆಯವ್ಯಯ ಬಿಕರಿಯು ಲಾಭ-ನಷ್ಟ ಶೂನ್ಯ ಬಿಕರಿಯ ಎರಡರಷ್ಟಿದ್ದಲ್ಲಿ, ಅಂಚಿನ ರಕ್ಷೆಯು

(A) 50% (B) 5%
(C) 100% (D) 200%

**20.** **ಹೇಳಿಕೆ (A)** : ಲೆಕ್ಕಶಾಸ್ತ್ರ ಲಾಭಕ್ಕೂ, ಅರ್ಥಶಾಸ್ತ್ರ ಲಾಭಕ್ಕೂ ವ್ಯತ್ಯಾಸವಿದೆ.

**ಹೇಳಿಕೆ (B)** : ಲೆಕ್ಕಶಾಸ್ತ್ರಜ್ಞ ಸುವ್ಯಕ್ತ ಹಾಗೂ ಅವ್ಯಕ್ತ ಎರಡೂ ಖರ್ಚುಗಳನ್ನು ಪರಿಗಣಿಸಿದರೆ, ಅರ್ಥಶಾಸ್ತ್ರಜ್ಞ ಮಾತ್ರ ಅವ್ಯಕ್ತ ಖರ್ಚುಗಳನ್ನಷ್ಟೆ ಪರಿಗಣಿಸುತ್ತಾನೆ.

**ಸಂಕೇತಗಳು :**

(A) (A) ಮತ್ತು (B) ಎರಡೂ ಸರಿ
(B) (A) ಸರಿ ಮತ್ತು (B) ಸರಿಯಲ್ಲ
(C) (A) ಮತ್ತು (B) ಎರಡೂ ಸರಿಯಲ್ಲ
(D) (A) ಸರಿಯಲ್ಲ ಮತ್ತು (B) ಸರಿ

**21.** **ಹೇಳಿಕೆ (A)** : ಸರಾಸರಿ ವೆಚ್ಚ (AC) ರೇಖೆ ಹಾಗೂ ಸರಾಸರಿ ಅಸ್ಥಿರ ವೆಚ್ಚ (AVC) ರೇಖೆಗಳೆರಡೂ ಸಮನಾಗಿ ಕಾಣಿಸುತ್ತವೆ.

**ಹೇಳಿಕೆ (B)** : ಉತ್ಪಾದನೆಯಲ್ಲಿ ಹೆಚ್ಚಳವಾದಂತೆ AC ಹಾಗೂ AVC ಗಳ ಅಂತರ ಕಡಿಮೆಯಾಗುತ್ತದೆ.

**ಸಂಕೇತಗಳು :**

(A) ಹೇಳಿಕೆ (A) ಸರಿಯಲ್ಲ ಮತ್ತು (B) ಸರಿ
(B) ಎರಡೂ ಹೇಳಿಕೆಗಳು ಸರಿ
(C) ಹೇಳಿಕೆ (A) ಸರಿ ಮತ್ತು (B) ಸರಿಯಲ್ಲ
(D) ಎರಡೂ ಹೇಳಿಕೆಗಳು ಸರಿಯಲ್ಲ

**22.** ಕೆಳಗಿನವುಗಳನ್ನು ಜೋಡಿಸಿ :

| ಪಟ್ಟಿ – I | ಪಟ್ಟಿ – II |
|---|---|
| a) ಏಕರೂಪದ ಪದಾರ್ಥ | i) ಏಕಸ್ವಾಮ್ಯ |
| b) ವ್ಯತ್ಯಾಸಿತ ಪದಾರ್ಥ | ii) ಅಲ್ಪಸಂಖ್ಯಾಸ್ವಾಮ್ಯ |
| c) ವೈಶಿಷ್ಟ್ಯ ಪದಾರ್ಥ | iii) ಪರಿಪೂರ್ಣ ಪೈಪೋಟಿ |
| d) ಬಹುಮೊತ್ತದ ಹೂಡಿಕೆ ಉತ್ಪಾದನೆ | iv) ಏಕಸ್ವಾಮ್ಯ ಪೈಪೋಟಿ |

**ಸಂಕೇತಗಳು :**

| | (a) | (b) | (c) | (d) |
|---|---|---|---|---|
| (A) | (iv) | (i) | (iii) | (ii) |
| (B) | (iii) | (iv) | (ii) | (i) |
| (C) | (iii) | (iv) | (i) | (ii) |
| (D) | (iv) | (i) | (ii) | (iii) |

**17.** Arrange the following in the order in which they were established ?

I. BSE
II. NSE
III. LSE
IV. UTI

**Codes** :

| | | | | |
|---|---|---|---|---|
| (A) | III | I | II | IV |
| (B) | III | II | I | IV |
| (C) | IV | II | I | III |
| (D) | II | III | IV | I |

**18.** **Assertion (A)** : NAV is associated with Mutual Fund Industry.

**Reason (R)** : NAV is a measure of performance of an investment plan.

**Codes** :

(A) (A) is correct, but (R) is incorrect
(B) (A) is incorrect, but (R) is correct
(C) Both (A) and (R) are incorrect
(D) Both (A) and (R) are correct

**19.** Given the budgeted sales two times that of break-even sales, then the margin of safety will be

(A) 50% (B) 5%
(C) 100% (D) 200%

**20.** **Statement (A)** : One finds usually a difference between accounting profit and economic profit.

**Statement (B)** : While Accountant takes both explicit and implicit costs, economist takes only implicit costs into account in finding out total cost.

**Codes** :

(A) Both (A) and (B) are correct
(B) (A) is correct and (B) is incorrect
(C) Both (A) and (B) incorrect
(D) (A) is incorrect and (B) is correct

**21.** **Statement (A)** : Both Average Cost (AC) curve and the Average Variable Cost (AVC) curve look the same in all aspects.

**Statement (B)** : The gap between AC and AVC curves narrows down with the increase in output.

**Codes** :

(A) Statement (A) is incorrect and (B) is correct
(B) Both the statements are correct
(C) Statement (A) is correct and (B) is incorrect
(D) Both statements are wrong

**22.** Match the following :

| **List – I** | **List – II** |
|---|---|
| a) Homogeneous product | i) Monopoly |
| b) Differentiated product | ii) Oligopoly |
| c) Unique product | iii) Perfect competition |
| d) Production requiring huge investment | iv) Monopolistic competition |

**Codes** :

| | **(a)** | **(b)** | **(c)** | **(d)** |
|---|---|---|---|---|
| (A) | (iv) | (i) | (iii) | (ii) |
| (B) | (iii) | (iv) | (ii) | (i) |
| (C) | (iii) | (iv) | (i) | (ii) |
| (D) | (iv) | (i) | (ii) | (iii) |

**23.** ಈ ಕೆಳಗಿನವುಗಳಲ್ಲಿ ಯಾವುದು "marginal" ಪದಕ್ಕೆ ಸಮವಿಲ್ಲ ?

(A) ಜಾರು

(B) ಡಿರೈವೆಟಿವ್

(C) ಬದಲಾವಣೆ ದರ

(D) ಬದಲಾವಣೆ ಪ್ರಮಾಣ

**24.** ತಾಟಸ್ಥ್ಯ ರೇಖೆಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆ ಸರಿ ?

(A) ತಾಟಸ್ಥ್ಯ ರೇಖೆಗಳು ಮೂಲಸ್ಥಾನಕ್ಕೆ ಪೀನವಾಗಿರುತ್ತವೆ.

(B) ತಾಟಸ್ಥ್ಯ ರೇಖೆಗಳು 'X' ಕಕ್ಷೆಯನ್ನು ತಲುಪುತ್ತವೆ.

(C) ಹಲವು ಬಾರಿ ಎರಡು ತಾಟಸ್ಥ್ಯ ರೇಖೆಗಳು ಸ್ಪಂದಿಸುತ್ತವೆ.

(D) ತಾಟಸ್ಥ್ಯ ರೇಖೆಗಳು ಕಾರ್ಡಿನಲ್ ಸಿದ್ಧಾಂತವನ್ನು ಅವಲಂಬಿಸಿದೆ.

**25.** ಒಂದು ಉದ್ದಿಮೆಯ ಲಾಭವೃದ್ಧಿ ದರದ ಉತ್ಪಾದನೆಯನ್ನು ಈ ಕೆಳಗಿನ ಯಾವುದರೊಂದಿಗೆ ಸರಿದೂಗಿಸಬಹುದು ?

(A) ಅಂಚಿನ ವೆಚ್ಚದೊಂದಿಗೆ ಅಂಚಿನ ಆದಾಯ

(B) ಅಂಚಿನ ವೆಚ್ಚದೊಂದಿಗೆ ಸರಾಸರಿ ವೆಚ್ಚ

(C) ಅಂಚಿನ ವೆಚ್ಚದೊಂದಿಗೆ ಸರಾಸರಿ ಆದಾಯ

(D) ಸರಾಸರಿ ವೆಚ್ಚದೊಂದಿಗೆ ಸರಾಸರಿ ಆದಾಯ

**26.** ಸರಾಸರಿ ಆದಾಯ ಹಾಗೂ ಸರಾಸರಿ ವೆಚ್ಚಗಳ ಮಧ್ಯದ ಅಂತರ ಶೂನ್ಯವಾಗಿದ್ದರೆ

(A) ಉದ್ದಿಮೆಗೆ ಲಾಭವೂ ಇಲ್ಲ ನಷ್ಟವೂ ಇಲ್ಲ

(B) ಉದ್ದಿಮೆಯು ಸಹಜ ಲಾಭ ಮಾಡುತ್ತದೆ

(C) ಉದ್ದಿಮೆಯು ಆರ್ಥಿಕ ಲಾಭ ಮಾಡುತ್ತದೆ

(D) ಉದ್ದಿಮೆಯು ಆರ್ಥಿಕ ನಷ್ಟ ಅನುಭವಿಸುತ್ತದೆ

**27.** ಒಂದು ನಿರ್ದಿಷ್ಟ ಉಣಿತದಿಂದ ಹೆಚ್ಚಿನ ಪ್ರಮಾಣದ ಉತ್ಪಾದನೆ ಅಥವಾ ಸೇವೆಯ ಗಳಿಸುವಿಕೆಯನ್ನು ಏನೆಂದು ಕರೆಯಲಾಗುತ್ತದೆ ?

(A) ಸೂಕ್ತ ಉತ್ಪಾದನೆ

(B) ಉತ್ಪಾದನಾ ಕಾರ್ಯ

(C) ಗರಿಷ್ಠ ಉತ್ಪಾದನೆ

(D) ಉತ್ಪಾದನಾ ಮೊತ್ತ

**28.** ಹಿಂಚಲನಾ ವಿಶ್ಲೇಷಣೆಯು ಎರಡು ಅಥವಾ ಹೆಚ್ಚು ಅಸ್ಥಿರಸಂಖ್ಯೆಗಳ ಮಧ್ಯೆ ________ ಸಂಬಂಧಗಳನ್ನು ಸ್ಥಾಪಿಸಲು ಸಹಾಯ ಮಾಡುತ್ತದೆ.

(A) ಅರ್ಥಪೂರ್ಣ (B) ಕಾರ್ಯಾತ್ಮಕ

(C) ಸೌಹಾರ್ದಯುತ (D) ಗುಣಕಾಂಶ

**29.** ಯಾವ ವಿತರಣೆಯಲ್ಲಿ ಸರಾಸರಿ, ಮಧ್ಯಕ ಮತ್ತು ಬಹುಳಕಗಳ ಮೌಲ್ಯಗಳು ಸಮನಾಗಿಲ್ಲವೊ ಅಂತಹುದನ್ನು ________ ಎನ್ನುತ್ತಾರೆ.

(A) ಸಾಮಾನ್ಯ ವಿತರಣೆ

(B) ಅನುರೂಪ ವಿತರಣೆ

(C) ವಿರೂಪ ವಿತರಣೆ

(D) ಸೈದ್ಧಾಂತಿಕ ವಿತರಣೆ

**30.** **ಹೇಳಿಕೆ (A)** : ಯಾವ ಸಂಖ್ಯಾಶಾಸ್ತ್ರದ ಪರೀಕ್ಷೆಯೊಳಗೆ ಜನಸಂಖ್ಯೆಗೆ (population) ಸಂಬಂಧಿಸಿದಂತೆ ನಿರ್ದಿಷ್ಟ ಊಹೆಗಳನ್ನು ಮಾಡಿಕೊಳ್ಳುವರೋ ಅದಕ್ಕೆ ಪ್ಯಾರಮೆಟ್ರಿಕ್ ಪರೀಕ್ಷೆ ಎಂದು ಕರೆಯುತ್ತಾರೆ.

**ಹೇಳಿಕೆ (B)** : ಹೆಚ್ಚಿನ ಮಟ್ಟಿನ ಪ್ರಕರಣಗಳಲ್ಲಿ ಪ್ಯಾರಮೆಟ್ರಿಕ್ ಪರೀಕ್ಷೆಗಳನ್ನೇ ಬಳಸುತ್ತಾರೆ ಏಕೆಂದರೆ ಅವುಗಳು ಮಾಹಿತಿಯ ವಿತರಣೆಯು ಸಾಮಾನ್ಯವಾಗಿರಬೇಕೆಂದು ಬಯಸುವುದಿಲ್ಲ.

**ಸಂಕೇತಗಳು :**

(A) ಎರಡೂ (A) ಮತ್ತು (B) ಸರಿಯಾಗಿವೆ

(B) ಎರಡೂ (A) ಮತ್ತು (B) ಸರಿಯಾಗಿಲ್ಲ

(C) (A) ಸರಿಯಾಗಿದೆ ಮತ್ತು (B) ಸರಿಯಾಗಿಲ್ಲ

(D) (A) ಸರಿಯಾಗಿಲ್ಲ ಮತ್ತು (B) ಸರಿಯಾಗಿದೆ

**23.** Which of the following is not an equivalent of the term ‘marginal’ ?

(A) Slope

(B) Derivative

(C) Rate of change

(D) Degree of change

**24.** Which one of the following is true with regard to indifference curves ?

(A) Indifference curves are usually convex to the origin.

(B) Indifference curve touches the ‘X’ axis.

(C) Sometimes two indifference curves intersect.

(D) Indifference curves are based on cardinal approach.

**25.** Profit maximising rate of output of a firm is determined by equating

(A) Marginal Cost with Marginal Revenue

(B) Marginal Cost with Average Cost

(C) Marginal Cost with Average Revenue

(D) Average Cost with Average Revenue

**26.** When the difference between average revenue and average cost is zero

(A) The firm is neither making profit nor incurring loss

(B) The firm is making normal profit

(C) The firm is making economic profit

(D) The firm is making economic loss

**27.** The maximum quantity of a product or service that can be produced by a set off inputs is known as

(A) Optimum production

(B) Production function

(C) Maximum production

(D) Total production

**28.** Regression analysis helps in establishing a ________ relationship between two or more variables.

(A) Meaningful (B) Functional

(C) Cordial (D) Coefficient

**29.** A distribution in which values of median, mean and mode are not equal is considered as

(A) Normal distribution

(B) Symmetrical distribution

(C) Asymmetrical distribution

(D) Theoretical distribution

**30.** **Statement (A)** : A statistical test, in which specific assumptions are made about the population parameter is known as parametric test.

**Statement (B)** : Parametric tests are used in most of the cases because they do not require that the data follow the normal distribution.

**Codes** :

(A) Both (A) and (B) are correct

(B) Both (A) and (B) are incorrect

(C) (A) is correct and (B) is incorrect

(D) (A) is incorrect and (B) is correct

**31.** ಎರಡುಜನಸಂಖ್ಯೆ(populations)ಸರಾಸರಿಯನ್ನು ಜೊತೆಯಾಗಿ ಹೋಲಿಸುವ ಪದ್ಧತಿಯನ್ನು _______ ಎನ್ನುತ್ತಾರೆ.

(A) ಊಹೆಗಳ ಪರೀಕ್ಷೆ

(B) ವಿಚಲನೆಯ ವಿಶ್ಲೇಷಣೆ

(C) ಲ್ಯಾಟಿನ್ ಚೌಕಟ್ಟಿನ ಮಾದರಿ

(D) 'Z' ಪರೀಕ್ಷೆ

**32.** ಈ ಕೆಳಗಿನವುಗಳನ್ನು ಹೊಂದಿಸಿ.

| ಪಟ್ಟಿ – I | ಪಟ್ಟಿ – II |
|---|---|
| a) ಸಾಮಾನ್ಯ ವಿತರಣೆ | i) ಒಂದು ಅವಲಂಬಿತ ಚರಸಂಖ್ಯೆ |
| b) ಕೈ–ಸ್ಕ್ವೆಯರ್ ಪರೀಕ್ಷೆ | ii) ಧನಾತ್ಮಕ ಓರೆಯಾಗಿರುವ |
| c) ಪಾಯಿಸನ್ ವಿತರಣೆ | iii) ಏಕಬಹುಳಕ |
| d) ಬಹು ಹಿಂಚಲನೆ | iv) ಗುಡ್‌ನೆಸ್ ಆಫ್ ಫಿಟ್ ಪರೀಕ್ಷೆ |

**ಸಂಕೇತಗಳು :**

| | (a) | (b) | (c) | (d) |
|---|---|---|---|---|
| (A) | (iii) | (i) | (ii) | (iv) |
| (B) | (iii) | (iv) | (i) | (ii) |
| (C) | (ii) | (iii) | (iv) | (i) |
| (D) | (iii) | (iv) | (ii) | (i) |

**33.** ಎರಡು ಉತ್ತರಗಳನ್ನು ಒಬ್ಬನೇ ವ್ಯಕ್ತಿಯಿಂದ ಬೇರೆ ಬೇರೆ ಸಮಯಗಳಲ್ಲಿ ಪಡೆದುಕೊಳ್ಳುವುದಕ್ಕೆ _____ ಎಂದು ಕರೆಯುತ್ತಾರೆ.

(A) ಬಹು ಮಾದರಿ

(B) ಅವಲಂಬಿತ ಮಾದರಿ

(C) ಸ್ವತಂತ್ರ ಮಾದರಿ

(D) ಎರಡು ಬಾಲಗಳ ಪರೀಕ್ಷೆ

**34.** ಸಮಯ ಸರಣಿ ವಿಶ್ಲೇಷಣೆಯು ಹೀಗೆ ಇರುತ್ತದೆ

(A) ಉದ್ದದ ವಿನ್ಯಾಸ

(B) ಸರಣಿ ವಿನ್ಯಾಸ

(C) ಭಾಗೀಯ ವಿನ್ಯಾಸ

(D) ಅಡ್ಡದ ವಿನ್ಯಾಸ

**35.** ಶೂನ್ಯ ಆಧಾರ ಊಹೆಯನ್ನು ಒಪ್ಪಿಕೊಂಡಾಗ ಭಾಗಗಳು ________ ಮತ್ತು ಅವುಗಳ ನಡುವಿನ ವ್ಯತ್ಯಾಸಗಳು ಆಕಸ್ಮಾತ್ತಾಗಿರುತ್ತವೆ ಎಂದು ಭಾವಿಸಲಾಗುತ್ತದೆ.

(A) ಸಣ್ಣವು (B) ದೊಡ್ಡವು

(C) ಸಮ (D) ಬೇರೆ

**36.** ಹೆಸರುವಾಸಿಯಾದ ನಿರ್ವಹಣೆಯ ವ್ಯಾಖ್ಯಾನ ''ನಿರ್ವಾಹಕರು ಏನನ್ನು ಮಾಡುತ್ತಾರೋ ಅದೇ ನಿರ್ವಹಣೆ''ವನ್ನು ನೀಡಿದವರು

(A) ಪೀಟರ್ ಎಫ್. ಡ್ರಕರ್

(B) ಹೆನ್ರಿ ಫಾಯಲ್

(C) ಲೂಯಿಸ್ ಎ. ಅಲೆನ್

(D) ಎಫ್.ಡಬ್ಲ್ಯೂ. ಟೇಲರ್

**37.** ತನ್ನ ಕೊಡುಗೆಗಳನ್ನು ತಳಮಟ್ಟದ ನಿರ್ವಹಣೆಗೆ ಕೇಂದ್ರೀಕರಿಸಿದ ನಿರ್ವಹಣಾ ಚಿಂತಕ

(A) ಲೂಯಿಸ್ ಎ. ಅಲೆನ್

(B) ಲಿಲಿಯನ್ ಗಿಲ್‌ಬರ್ತ್

(C) ರಾಬರ್ಟ್ ಓವೆನ್

(D) ಎಫ್.ಡಬ್ಲ್ಯೂ. ಟೇಲರ್

**38.** ಕೈಜ಼ೆನ್‌ಗೆ ಇದರಲ್ಲಿ ನಂಬಿಕೆ

(A) ಕಾರ್ಯವನ್ನು ಸರಿಯಾಗಿ ನಿರ್ವಹಿಸುವುದು

(B) ಸರಿಯಾದ ಕಾರ್ಯವನ್ನು ನಿರ್ವಹಿಸುವುದು

(C) ನಿರಂತರ ಸುಧಾರಣೆ

(D) ಸಂಪೂರ್ಣ ಗುಣಮಟ್ಟದ ನಿರ್ವಹಣೆ

**31.** The method used to compare the means of more than two populations simultaneously is called

(A) Testing of hypothesis

(B) Analysis of variance

(C) Latin square design

(D) 'Z' test

**32.** Match the following :

| | List – I | | List – II |
|---|---|---|---|
| a) | Normal distribution | i) | One dependent variable |
| b) | Chi-square test | ii) | Positively skewed |
| c) | Poisson distribution | iii) | Unimodal |
| d) | Multiple regression | iv) | Goodness of fit test |

**Codes** :

| | (a) | (b) | (c) | (d) |
|---|---|---|---|---|
| (A) | (iii) | (i) | (ii) | (iv) |
| (B) | (iii) | (iv) | (i) | (ii) |
| (C) | (ii) | (iii) | (iv) | (i) |
| (D) | (iii) | (iv) | (ii) | (i) |

**33.** When two responses are taken from the same respondent at two points of time, it is called

(A) Multiple sample

(B) Dependent sample

(C) Independent sample

(D) Two tailed test

**34.** Time series analysis are a form of

(A) Longitudinal designs

(B) Serial designs

(C) Sectional designs

(D) Latitudinal designs

**35.** When null hypothesis is accepted, it can be assumed that proportions are _______ and the differences are due to chance.

(A) Small (B) Large

(C) Equal (D) Different

**36.** The famous definition of management "Management is what a manager does" is given by

(A) Peter F. Drucker

(B) Henry Fayol

(C) Louis A. Allen

(D) F.W. Taylor

**37.** The management thinker who concentrated his contributions to the shop floor management

(A) Louis A. Allen

(B) Lillian Gilberth

(C) Robert Owen

(D) F.W. Taylor

**38.** Kaizen believes in

(A) Doing things right

(B) Doing right things

(C) Continuous improvement

(D) Total quality management

**39.** ಸೈಮನ್‌ರವರಹೆಸರಿನೊಂದಿಗೆತಳುಕುಹಾಕಿಕೊಂಡಿರುವ ನಿರ್ಧರಿಸುವಿಕೆಯ ಮಾದರಿ

(A) ನಿರ್ವಹಣಾ ಚೌಕಟ್ಟಿನ ಮಾದರಿ

(B) ಗುರಿಯ ಮಾದರಿ

(C) ವಿವೇಚನಾ ಮಾದರಿ

(D) ಆಡಳಿತಾತ್ಮಕ ಮಾದರಿ

**40.** **ಹೇಳಿಕೆ (A)** : ಯಾವಾಗ ಅಧಿಕಾರವು ನಾಯಕ ಮತ್ತು ಅವನ ಅಧೀನ ಸಿಬ್ಬಂದಿಯ ಮಧ್ಯೆ ಇಬ್ಭಾಗವಾಗುವುದೊ ಆಗ ನಿರಂಕುಶ ಪ್ರಭುತ್ವ ಅವತರಿಸುತ್ತದೆ.

**ಹೇಳಿಕೆ (B)** : ನಿರ್ಧರಿಸುವಿಕೆಯ ಪ್ರಕ್ರಿಯೆಯಲ್ಲಿ ಸಿಬ್ಬಂದಿ ಮತ್ತು ಇತರರನ್ನು ಒಳಗೊಳ್ಳುವ ನಾಯಕತ್ವ ಎಂದರೆ ವಿಶ್ವಾಸಾತ್ಮಕ ನಾಯಕತ್ವ.

**ಸಂಕೇತಗಳು :**

(A) (A) ಮತ್ತು (B) ಎರಡೂ ಹೇಳಿಕೆಗಳು ಸರಿ

(B) (A) ಮತ್ತು (B) ಎರಡೂ ಹೇಳಿಕೆಗಳು ತಪ್ಪು

(C) ಹೇಳಿಕೆ (A) ಸರಿ ಮತ್ತು (B) ತಪ್ಪು

(D) ಹೇಳಿಕೆ (A) ತಪ್ಪು ಮತ್ತು (B) ಸರಿ

**41.** ಈ ಕೆಳಗಿನವುಗಳನ್ನು ಹೊಂದಿಸಿ :

| **ಪಟ್ಟಿ – I** | **ಪಟ್ಟಿ – II** |
|---|---|
| a) ಹೆನ್ರಿ ಎಲ್. ಗ್ಯಾಂಟ್ | i) ಕಾನ್‌ಬಾನ್ ಮಾರ್ಗ |
| b) ಕ್ಲೇಟನ್ ಪೌಲ್ ಆಲ್ಡರ್‌ಫರ್ | ii) 'Z' ಸಿದ್ಧಾಂತ |
| c) ತೈಚಿ ಓಹ್ನೊ | iii) ಇಆರ್‌ಜಿ ಸಿದ್ಧಾಂತ |
| d) ವಿಲಿಯಂ ಔಚಿ | iv) ಕಾರ್ಯ ಮತ್ತು ಬೋನಸ್ ಯೋಜನೆ |

**ಸಂಕೇತಗಳು :**

| | **(a)** | **(b)** | **(c)** | **(d)** |
|---|---|---|---|---|
| (A) | (ii) | (iii) | (iv) | (i) |
| (B) | (iv) | (iii) | (i) | (ii) |
| (C) | (iv) | (i) | (ii) | (iii) |
| (D) | (iii) | (i) | (iv) | (ii) |

**42.** ನೌಕರರು ಕಾರ್ಯನಿರ್ವಹಿಸುವ ಸಮಯವನ್ನು ಮೊಟ್ಟ ಮೊದಲ ಬಾರಿಗೆ 14 ಗಂಟೆಗಳಿಂದ 10.5 ಗಂಟೆಗಳಿಗೆ ಕಡಿತ ಮಾಡಿದ ವ್ಯಕ್ತಿ

(A) ಎಫ್.ಡಬ್ಲ್ಯೂ. ಟೇಲರ್

(B) ರಾಬರ್ಟ್ ಓವೆನ್

(C) ಪೀಟರ್ ಎಫ್. ಡ್ರಕರ್

(D) ವಿಲಿಯಂ ಗಾಲ್‌ಬ್ರೈತ್

**43.** **ದೃಢ ಹೇಳಿಕೆ (A)** : ವಿವಿಧ ಹಂತಗಳ ಅಗತ್ಯತೆಗಳನ್ನು ಒಂದೇ ಸಮಯದಲ್ಲಿ ಚಲನಗೊಳಿಸಬಹುದು ಎಂದು ಇಆರ್‌ಜಿ ಸಿದ್ಧಾಂತವು ಊಹಿಸುತ್ತದೆ.

**ತರ್ಕ (R)** : ಕೆಳಗಿನ ಹಂತದ ಅವಶ್ಯಕತೆಗಳ ಸಂಪೂರ್ಣ ತೃಪ್ತಿಗೊಳ್ಳದೆಯೆ ಮೇಲಿನ ಹಂತದ ಅವಶ್ಯಕತೆಗಳು ಉದ್ಭವಿಸಬಹುದು.

**ಸಂಕೇತಗಳು :**

(A) ಎರಡೂ (A) ಮತ್ತು (R) ಸರಿಯಾಗಿವೆ

(B) ಎರಡೂ (A) ಮತ್ತು (R) ಸರಿಯಾಗಿಲ್ಲ

(C) (A) ಸರಿಯಾಗಿದೆ ಮತ್ತು (R) ಸರಿಯಾಗಿಲ್ಲ

(D) (A) ಸರಿಯಾಗಿಲ್ಲ ಮತ್ತು (R) ಸರಿಯಾಗಿದೆ

**44.** ಉತ್ಪಾದನಾ ಕಲ್ಪನೆಯನ್ನು ಏನೆಂದು ಕರೆಯುತ್ತಾರೆ ?

(A) ದೊಡ್ಡ ಪ್ರಮಾಣದ ವಿತರಣೆಯ ಕಲ್ಪನೆ

(B) ದೊಡ್ಡ ಪ್ರಮಾಣದ ಗುರಿ ಇಡುವಿಕೆಯ ಕಲ್ಪನೆ

(C) ದೊಡ್ಡಪ್ರಮಾಣದಉತ್ಪಾದನೆಹಾಗೂವಿತರಣೆಯ ಕಲ್ಪನೆ

(D) ದೊಡ್ಡ ಪ್ರಮಾಣದ ಗುಣಮಟ್ಟದ ಕಲ್ಪನೆ

**45.** ಪ್ರತ್ಯಕ್ಷಜ್ಞಾನಾತ್ಮಕ ನಕ್ಷೆ ಯಾವುದಕ್ಕೆ ಸಮ ?

(A) ಗ್ರಾಹಕರ ಮೆದುಳು ನಕ್ಷೆ

(B) ವಿತರಣಾಕಾರರ ಮೆದುಳು ನಕ್ಷೆ

(C) ನಕ್ಷೆಯಲ್ಲಿ ಸರಕಿನ ಸ್ಥಾನೀಕರಣ

(D) ಸಗಟುಗಾರರ ಮೆದುಳು ನಕ್ಷೆ

**39.** The decision making model associated with the name of Simon is

(A) Managerial grid model

(B) Objective model

(C) Rational model

(D) Administrative model

**40.** **Statement (A)** : An autocratic leadership style occurs when power is split between the leader and his or her staff.

**Statement (B)** : Charismatic leadership is to involve staff and others in the decision making process.

**Codes** :

(A) Both (A) and (B) are correct

(B) Both (A) and (B) are incorrect

(C) (A) is correct and (B) is incorrect

(D) (A) is incorrect and (B) is correct

**41.** Match the following :

| List – I | List – II |
|---|---|
| a) Henry L. Gantt | i) Kanban approach |
| b) Clayton Paul Alderfer | ii) Theory Z |
| c) Taichi Ohno | iii) ERG theory |
| d) William Ouchi | iv) Task and bonus plan |

**Codes** :

| | (a) | (b) | (c) | (d) |
|---|---|---|---|---|
| (A) | (ii) | (iii) | (iv) | (i) |
| (B) | (iv) | (iii) | (i) | (ii) |
| (C) | (iv) | (i) | (ii) | (iii) |
| (D) | (iii) | (i) | (iv) | (ii) |

**42.** Person who reduced the working hours of employees from 14 hours to 10.5 hours for the first time is

(A) F.W. Taylor

(B) Robert Owen

(C) Peter F. Drucker

(D) William Galbraith

**43.** **Assertion (A)** : The ERG theory presumes that different levels of needs can be activated at the same time.

**Reasoning (R)** : A lower level need does not have to be completely satisfied before higher level needs can emerge.

**Codes** :

(A) Both (A) and (R) are correct

(B) Both (A) and (R) are incorrect

(C) (A) is correct and (R) is incorrect

(D) (A) is incorrect and (R) is correct

**44.** Production concept is called

(A) Mass distribution concept

(B) Mass targeting concept

(C) Mass production and distribution concept

(D) Mass quality concept

**45.** Perceptual mapping is

(A) Consumer brain mapping

(B) Distributors brain mapping

(C) Positioning of product in a map

(D) Wholesaler brain mapping

**46.** ಜೀವನ ಶೈಲಿ ವಿಶ್ಲೇಷಣೆಯು ಏನನ್ನು ಗಣನೆಗೆ ತೆಗೆದುಕೊಳ್ಳುತ್ತದೆ ?

(A) ಆಕರ್ಷಣೆ, ಇಚ್ಛೆ ಹಾಗೂ ಅಭಿಪ್ರಾಯಗಳು

(B) ಚಟುವಟಿಕೆಗಳು, ಬಂಡವಾಳ ಹೂಡಿಕೆಗಳು ಹಾಗೂ ಅಭಿಪ್ರಾಯಗಳು

(C) ಚಟುವಟಿಕೆಗಳು, ಇಚ್ಛೆಗಳು ಹಾಗೂ ಅವಕಾಶಗಳು

(D) ಚಟುವಟಿಕೆಗಳು, ಇಚ್ಛೆಗಳು ಹಾಗೂ ಅಭಿಪ್ರಾಯಗಳು

**47.** ಒಂದೇ ರೀತಿಯ ಮಾರುಕಟ್ಟೆಯು ಏನನ್ನು ಹೊಂದಿರುತ್ತದೆ ?

(A) ಗ್ರಾಹಕರ ವಿವಿಧ ಬೇಡಿಕೆಗಳು

(B) ಗ್ರಾಹಕರ ಏಕರೂಪದ ಲಕ್ಷಣಗಳು

(C) ಗ್ರಾಹಕರ ಏಕರೂಪದ ಆದಾಯದ ಮಟ್ಟಗಳು

(D) ಗ್ರಾಹಕರ ಏಕರೂಪದ ಜೀವನ ಶೈಲಿಗಳು

**48.** ವಸ್ತುವಿನ ಜೀವ ಋತುಮಾನದಲ್ಲಿ ಯಾವ ಹಂತದಲ್ಲಿ 'ಹೆಚ್ಚಿನ ಬೆಲೆ' ಯನ್ನು ನಿಗದಿಪಡಿಸಲಾಗುವುದು ?

(A) ಪ್ರಾಥಮಿಕ ಹಂತ

(B) ಬೆಳೆಯುವಿಕೆಯ ಹಂತ

(C) ಪರಿಪಕ್ವತೆಯ ಹಂತ

(D) ಬೀಳುವಿಕೆಯ ಹಂತ

**49.** ಸಾಮ್ಯತೆ ಹೊಂದಿರುವ ಹಲವು ವಸ್ತುಗಳ ಒಂದು ಗುಂಪನ್ನು ಏನೆಂದು ಕರೆಯುತ್ತಾರೆ ?

(A) ವಸ್ತುಗಳ ಸಂಸಾರ

(B) ವಸ್ತುಗಳ ಶ್ರೇಣಿ

(C) ವಸ್ತುಗಳ ಗುಂಪು

(D) ವಸ್ತುಗಳ ವಿಧ

**50.** ಮಾರುಕಟ್ಟೆ ಮಿಶ್ರಣದ '5' ನೇ 'P' ಯಾವುದು ?

(A) ಸ್ಥಾನೀಕರಣ (ಪೊಸಿಶನಿಂಗ್)

(B) ಪ್ಯಾಕೇಜಿಂಗ್

(C) ಹರಡುವಿಕೆ (ಪ್ರೊಪಗ್ಯಾಂಡಿಂಗ್)

(D) ಕಾಪಾಡುವಿಕೆ (ಪ್ರೊಟೆಕ್ಟಿಂಗ್)

**51.** ಹೊಂದಿಸಿ ಬರೆಯಿರಿ :

| **ಪಟ್ಟಿ – I** | **ಪಟ್ಟಿ – II** |
|---|---|
| a) ಉಪಯುಕ್ತತಾ ತತ್ವ | i) ಲಿಯೋನ್ ಫೆಸ್ಟಿಂಜರ್ |
| b) ಕಾಗ್ನಿಟಿವ್ ಡಿಸೊನೆನ್ಸ್ ತತ್ವ | ii) ಹೆನ್ರಿ ಫೋರ್ಡ್ |
| c) ಸಾಮಾಜಿಕ ಮಾರುಕಟ್ಟೆಯ ಕಲ್ಪನೆ | iii) ಆಲ್‌ಫ್ರೆಡ್ ಮಾರ್ಷಲ್ |
| d) ಉತ್ಪಾದನೆಯ ಕಲ್ಪನೆ | iv) ಥೋರ್ಸ್ಟಿನ್ ವೆಬ್ಲೆನ್ |

**ಸಂಕೇತಗಳು :**

| | (a) | (b) | (c) | (d) |
|---|---|---|---|---|
| (A) | (i) | (ii) | (iv) | (iii) |
| (B) | (iii) | (ii) | (i) | (iv) |
| (C) | (iv) | (i) | (iii) | (ii) |
| (D) | (iii) | (i) | (iv) | (ii) |

**52.** ಈ ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ :

| **ಪಟ್ಟಿ – I** | **ಪಟ್ಟಿ – II** |
|---|---|
| a) ಮಾರುಕಟ್ಟೆಯ ವಿಭಜನೆ | i) ಹೆಚ್ಚಿನ ಬೆಲೆ, ಹೆಚ್ಚಿನ ಪ್ರಚಾರ |
| b) ರ್‍ಯಾಪಿಡ್ ಸ್ಕಿಮ್ಮಿಂಗ್ ತಂತ್ರಗಾರಿಕೆ | ii) ಹೊಸ ವಸ್ತುವಿನ ಅಭಿವೃದ್ಧಿ |
| c) ಕಲ್ಪನೆಗಳ ಉದ್ಭವ | iii) ಗುರಿಯಿಟ್ಟ ಮಾರುಕಟ್ಟೆ |
| d) ಡಾಗ್‌ಮಾರ್ | iv) ಒಂದು ಪ್ರಚಾರದ ನಮೂನೆ |

**ಸಂಕೇತಗಳು :**

| | (a) | (b) | (c) | (d) |
|---|---|---|---|---|
| (A) | (i) | (iv) | (ii) | (iii) |
| (B) | (iii) | (i) | (ii) | (iv) |
| (C) | (ii) | (iii) | (iv) | (i) |
| (D) | (iii) | (ii) | (i) | (iv) |

**46.** Lifestyle analysis considers

(A) Attractions, interests and opinions

(B) Activities, investments and opinions

(C) Activities, interests and opportunities

(D) Activities, interests and opinions

**47.** Homogeneous market consists of

(A) Customers of divergent needs

(B) Customers of similar characteristics

(C) Customers of similar income levels

(D) Customers of similar lifestyles

**48.** In which of the following stage of a product's life premium price is charged for a product ?

(A) Introduction

(B) Growth

(C) Maturity

(D) Decline

**49.** A group of products within a product class that are closely related is called

(A) Product family

(B) Product class

(C) Product line

(D) Product type

**50.** The 5$^{th}$ 'P' of marketing mix strategy is

(A) Positioning

(B) Packaging

(C) Propaganding

(D) Protecting

**51.** Match the following :

| **List – I** | **List – II** |
|---|---|
| a) Utility theory | i) Leon Fistinger |
| b) Cognitive Dissonance Theory | ii) Henry Ford |
| c) Societal Marketing Concept | iii) Alfred Marshall |
| d) Production Concept | iv) Thorstein Veblen |

**Codes** :

| | **(a)** | **(b)** | **(c)** | **(d)** |
|---|---|---|---|---|
| (A) | (i) | (ii) | (iv) | (iii) |
| (B) | (iii) | (ii) | (i) | (iv) |
| (C) | (iv) | (i) | (iii) | (ii) |
| (D) | (iii) | (i) | (iv) | (ii) |

**52.** Match the following :

| **List – I** | **List – II** |
|---|---|
| a) Market segmentation | i) High price, high promotion |
| b) Rapid skimming strategy | ii) New product development |
| c) Idea generation | iii) Target marketing |
| d) DAGMAR | iv) An advertising model |

**Codes** :

| | **(a)** | **(b)** | **(c)** | **(d)** |
|---|---|---|---|---|
| (A) | (i) | (iv) | (ii) | (iii) |
| (B) | (iii) | (i) | (ii) | (iv) |
| (C) | (ii) | (iii) | (iv) | (i) |
| (D) | (iii) | (ii) | (i) | (iv) |

**53.** **ಹೇಳಿಕೆ (A)** : ಪ್ರಚಾರದ ಆಯವ್ಯಯವು ಕೆಲವು ಚಟುವಟಿಕೆಗಳಿಗೆ ನಿರ್ದಿಷ್ಟ ಅವಧಿಗೆ ಮೀಸಲಿಟ್ಟ ಹಣದ ಬಗ್ಗೆ ಯೋಜನೆ ಮಾಡುವುದು.

**ಹೇಳಿಕೆ (B)** : ವಸ್ತುವಿನ ಪ್ರಚಾರದ ಸಂವಹನಕ್ಕೆ USP ಯು ಸೃಜನಶೀಲತಾ ಸಂದೇಶದ ಪ್ರಭಾವವನ್ನು ನೀಡುತ್ತದೆ.

**ಸಂಕೇತಗಳು :**

(A) ಹೇಳಿಕೆ (A) ಸರಿಯಾಗಿದೆ ಮತ್ತು (B) ಸರಿಯಾಗಿಲ್ಲ

(B) ಹೇಳಿಕೆಗಳು (A) ಮತ್ತು (B) ಎರಡೂ ಸರಿಯಾಗಿವೆ

(C) ಹೇಳಿಕೆಗಳು (A) ಮತ್ತು (B) ಎರಡೂ ಸರಿಯಾಗಿಲ್ಲ

(D) ಹೇಳಿಗೆ (A) ಸರಿಯಾಗಿಲ್ಲ ಮತ್ತು (B) ಸರಿಯಾಗಿದೆ

**54.** **ಹೇಳಿಕೆ (A)** : ಸೇವೆಗಳನ್ನು ಅದೃಶ್ಯ ಹಾಗೂ ಬೇರ್ಪಡಿಸಲಾಗುವುದಿಲ್ಲ.

**ಹೇಳಿಕೆ (B)** : ಸೇವೆಯ ಸ್ಥಾನೀಕರಣದ ಕಲ್ಪನೆಯು ಗ್ರಾಹಕರು ಸೇವೆಯನ್ನು ಯಾವ ರೀತಿಯಲ್ಲಿ ಗ್ರಹಿಸುತ್ತಾರೆ ಹಾಗೂ ನಿರ್ಣಯಿಸುತ್ತಾರೆ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ.

**ಸಂಕೇತಗಳು :**

(A) (A) ಮತ್ತು (B) ಎರಡೂ ಹೇಳಿಕೆಗಳು ಸರಿಯಾಗಿವೆ

(B) ಹೇಳಿಕೆ (A) ಸರಿಯಾಗಿದೆ ಮತ್ತು (B) ಸರಿಯಾಗಿಲ್ಲ

(C) (A) ಮತ್ತು (B) ಎರಡೂ ಹೇಳಿಕೆಗಳು ಸರಿಯಾಗಿಲ್ಲ

(D) ಹೇಳಿಕೆ (A) ಸರಿಯಾಗಿಲ್ಲ ಮತ್ತು (B) ಸರಿಯಾಗಿದೆ

**55.** ಚಾಲ್ತಿ ಬೆಲೆಗಳಲ್ಲಿ ಅಂದಾಜಿಸಿದ ಒಂದು ಯೋಜಿತ ಕಾರ್ಯದ ನಿವ್ವಳ ನಗದು ಪ್ರತಿಫಲವು ರೂ. 5,000 ಗಳಷ್ಟು, ಅತಿಪ್ರಸರಣದ ಅಂದಾಜಿತ ದರವು ಪ್ರತಿಶತ 5 ರಷ್ಟು ಮತ್ತು ಬಂಡವಾಳ ವೆಚ್ಚವು ಪ್ರತಿಶತ 15.5 ರಷ್ಟು ಇದ್ದಾಗ ಪ್ರಥಮ ವರ್ಷದ ಅಂತ್ಯದಲ್ಲಿ ನಗದು ಒಳಹರಿವಿನ ಸೋಡೀಕರಣದ ನಂತರದ ಮೌಲ್ಯ

